

April 2013

# ಕಾನನ

ನಿಸರ್ಗದೆಡೆಗೆ ಪಯಣ

BANNERUGHATTA

**WILDLIFE CONSERVATION GROUP**

# ಕಾನನ

APRIL 2013

ನಿಸರ್ಗದೆಡೆಗೆ ಪಯಣ

* ಶ್ರೀರಾಮಕೃಷ್ಣರ ಉಪದೇಶಗಳಲ್ಲಿ ಪ್ರಾಣಿ-ಪಕ್ಷಿಗಳು
* ಕಕ್ಕೆ ಮರ
* ಹಕ್ಕಿಲೋಕ
* ವಿವಿ ಅಂಕಣ
* ಮುಸ್ಸಂಜೆ ಮಳೆ (ಕವನ)




ಸಂಪಾದಕರು : ಅಶ್ವಥ ಕೆ.ಎನ್ ವಿನ್ಯಾಸ : ನಾಗೇಶ್ ಓ.ಎಸ್

ಲೇಖಕ ವೃಂದ : ಸ್ವಾಮಿ ಸೌಖ್ಯಾನಂದಜೀ ಮಹಾರಾಜ್, ಶಂಕರಪ್ಪ ಕೆ.ಪಿ, ಅಶ್ವಥ ಕೆ.ಎನ್, ಮನು ಆರ್.ವಿ, ಶೃತಿ ಎಂ,

ಕರಡು ತಿದ್ದುಪಡಿ : ಮುರಳಿ.ಎಸ್

ಮುಖಪುಟ : ಕಕ್ಕೆ ಹೂ.

kaanana.mag@gmail.com





# ಸಂಪಾದಕೀಯ

ಭೂಮಿಯ ಮೇಲೆ ನಡೆಯುತ್ತಿರುವ ಮನುಷ್ಯನ ಆರ್ಭಟ ಕೃತ್ಯಗಳು ಒಂದಲ್ಲ ಎರಡಲ್ಲ, ಪಟ್ಟಿ ಮಾಡಿದರೆ ಸಾವಿರಾರು. ಭುವಿಯ ಮೇಲಿನ ಯಾವುದೇ ಜೀವಿಯೂ ಮಾಡದ ಪರಿಸರ ಮೇಲಿನ ಹಾನಿಯನ್ನು ಮನುಷ್ಯ ಮಾತ್ರ ಮಾಡುತ್ತಿದ್ದಾನೆ. ತೇಜಸ್ವಿಯವರು ಹೇಳುವಂತೆ ಮಾನವ ಜನ್ಯವಲ್ಲದ, ಆದರೂ ಮಾನವನಿಂದ ನಿಯಂತ್ರಿಸಲು ಅಥವ ಅದನ್ನು ಅರ್ಥಮಾಡಿಕೊಂಡು ಅದಕ್ಕನುಗುಣವಾಗಿ ನಾಗರೀಕತೆ, ಕೃಷಿ, ಮತ್ತು ವನಸಂಪತ್ತನ್ನು ರೂಡಿಸಲು ಮನುಷ್ಯ ಪೂರ್ತಿ ವಿಫಲವಾಗಿರುವುದು ದೌರ್ಬಲ್ಯ. ಕೈಗಾರಿಕೆಗಳಿಂದ, ಉರುವಲಿಗಾಗಿ ಕಾಡು ಸೋಸುತ್ತಿರುವುದರಿಂದ, ಉಚ್ಚಿಷ್ಠಗಳನ್ನೆಲ್ಲ ನದಿಗಳಿಗೆ ಬಿಡುವುದರಿಂದ, ಹೀಗೇ ಇದಕ್ಕೆ ಉದಾಹರಣೆಯಾಗಿ ಲೆಕ್ಕವಿಲ್ಲದಷ್ಟು ಪಟ್ಟಿ ಕೊಡಬಹುದು. ಇಷ್ಟೆಲ್ಲದರ ನಡುವೆಯೂ ಇಷ್ಟವಿಲ್ಲದ ದೇವರಗೆ ಪೂಜೆ ಮಾಡುವಂತೆ ಏಪ್ರಿಲ್ **22ಕ್ಕೆ “ವಿಶ್ವ ಭೂಮಿ ದಿನ”**ವನ್ನು ಆಚರಿಸುತ್ತಿರುವುದು ಶೋಚನಿಯ ಸಂಗತಿ!.

ಪ್ರತಿಯೊಬ್ಬರಿಗೂ ಸಹ ಪ್ರಕೃತಿಯೇ ಸ್ಫೂರ್ತಿಯ ಮೂಲ! ಗಹನವಾದ ಅಧ್ಯಾತ್ಮಿಕ ತತ್ವಗಳನ್ನು ಅವುಗಳ ರಹಸ್ಯಗಳನ್ನು ಶ್ರೀರಾಮಕೃಷ್ಣರಂತಹ ಸಂತರು ಪ್ರಾಣಿ, ಪಕ್ಷಿಗಳಲ್ಲಿ ಕಂಡುಕೊಂಡರು. ಅಲ್ಲದೆ ಗಹನವಾದ ಅಧ್ಯಾತ್ಮಿಕ ತತ್ವಗಳನ್ನು ಸಾಮಾನ್ಯ ಜನರಿಗೆ ಸರಳವಾಗಿ ತಿಳಿಸಲು ಅವರು ಉಪಯೋಗಿಸಿಕೊಂಡ ವಸ್ತುಗಳೇ ಪ್ರಕೃತಿಯಲ್ಲಿ ದೊರೆಯುವ ಪ್ರಾಣಿ, ಪಕ್ಷಿಗಳು!, ಶಿವನಹಳ್ಳಿ ರಾಮಕೃಷ್ಣ ಮಿಷನ್ನಿನ ಸ್ವಾಮೀಜಿಗಳಾದ ಸ್ವಾಮಿ ಸೌಖ್ಯಾನಂದಜೀ ಮಹಾರಾಜ್ ರವರು ಕಾನನಕ್ಕೆ ಅಧ್ಯಾತ್ಮಿಕ ಲೇಪನವನ್ನು ಮಾಡಿದ್ದಾರೆ. ‘‘***ಶ್ರೀ ರಾಮಕೃಷ್ಣರ ಉಪದೇಶಗಳಲ್ಲಿ ಪ್ರಾಣಿ ಪಕ್ಷಿಗಳು***’ ಎಂಬ ಶೀರ್ಷಿಕೆಯಡಿಯಲ್ಲಿ ಕೆಲವು ಉಪದೇಶಗಳನ್ನು ಪ್ರತಿ ತಿಂಗಳು ಕಾನನದಲ್ಲಿ ನೋಡಬಹುದು.

ಅರಣ್ಯ, ವನ್ಯಜೀವಿ, ಪರಿಸರ ಸಂರಕ್ಷಣೆ, ವಿಜ್ಞಾನ, ವನ್ಯಜೀವಿ ಛಾಯಾಚಿತ್ರ, ಕವನ, ಕಥೆಗಳು ಹಾಗೂ ಲೇಖನಗಳನ್ನು ತಾವೂ ಕಾನನಕ್ಕೆ ಬರೆಯಬಹುದು.





# ಆಧ್ಯಾತ್ಮದಲ್ಲಿ ವನ್ಯಜೀವಿಗಳು


## ❋ ಶ್ರೀ ರಾಮಕೃಷ್ಣರ ಉಪದೇಶಗಳಲ್ಲಿ ಪ್ರಾಣಿ ಪಕ್ಷಿಗಳು



ನವಯುಗದ ವಿಜ್ಞಾನಿಗಳು ಪ್ರಕೃತಿಯನ್ನು ಅಧ್ಯಯನ ಮಾಡುತ್ತಾ ಅವರೆಲ್ಲರು ಪ್ರಾಣಿ, ಪಕ್ಷಿಗಳು ಇತರೆ ಜೀವಿಗಳ ಚಲನೆ, ಜೀವನವನ್ನು ಅಧ್ಯಯನ ನಡೆಸಿ, ಅವುಗಳ ನೆರವಿನಿಂದ ಅದ್ಭುತವಾದ ನೂತನ ತಂತ್ರಜ್ಞಾನ ಹಾಗೂ ನೂತನ ಯಂತ್ರಗಳನ್ನು ಕಂಡುಹಿಡಿದು, ಇಂದು ಮಾನವ ಹಕ್ಕಿಗಳಂತೆ ಆಕಾಶದಲ್ಲಿ ಹಾರಬಲ್ಲ, ಮೀನಿನಂತೆ ಈಜ ಬಲ್ಲ. ಎಷ್ಟು ಎತ್ತರಕ್ಕೆ ಬೇಕಾದರೂ ಹಾರಬಲ್ಲ, ಎಷ್ಟು ಆಳಕ್ಕೂ ಸಹ ಮುಳುಗಬಲ್ಲ. ಎಂತಹ ಬೆಟ್ಟವನ್ನು ಸಹ ಏರಬಲ್ಲ ಇದು ಅದ್ಭುತವೇ ಸರಿ. ಇದನ್ನು ನಾವು ನಮ್ಮ ನಿತ್ಯ ಜೀವನದಲ್ಲಿ ಕಣ್ಣಾರೆ ನೋಡುತ್ತಿದ್ದೇವೆ. ಜೀವನದಲ್ಲಿ ಅದನ್ನ ಅನುಭವಿಸುತ್ತಿದ್ದೇವೆ. ಅದೇ ರೀತಿ ಧಾರ್ಮಿಕ ವ್ಯಕ್ತಿಗಳಾದ ಸಾಧು ಸಂತರು, ಪ್ರಕೃತಿಯಿಂದ ಏನಾದರೂ ಕಲಿತರೆ ಎಂದು ನೋಡಿದಾಗ, ಅಲ್ಲಿಯೂ ಸಹ ನಾವು ಅದ್ಭುತವನ್ನು ಕಾಣಬಹುದು. ಪ್ರತಿಯೊಬ್ಬರಿಗೂ ಸಹ ಪ್ರಕೃತಿಯೇ ಸ್ಪೂರ್ತಿಯ ಮೂಲ ಎಂದು ತಿಳಿದು ಬರುತ್ತದೆ. ಗಹನವಾದ ಅಧ್ಯಾತ್ಮಿಕ ತತ್ವಗಳನ್ನು ಅವುಗಳ ರಹಸ್ಯಗಳನ್ನು ಸಂತರು ಪ್ರಾಣಿ, ಪಕ್ಷಿಗಳಲ್ಲಿ ಕಂಡುಕೊಂಡರು. ಅಲ್ಲದೆ ಗಹನವಾದ ಅಧ್ಯಾತ್ಮಿಕ ತತ್ವಗಳನ್ನು ಸಾಮಾನ್ಯ ಜನರಿಗೆ ಸರಳವಾಗಿ ತಿಳಿಸಲು ಅವರು ಉಪಯೋಗಿಸಿಕೊಂಡ ವಸ್ತುಗಳೇ ಪ್ರಕೃತಿಯಲ್ಲಿ ದೊರೆಯುವ ಪ್ರಾಣಿ, ಪಕ್ಷಿ ಹಾಗೂ ಇತರೆ ವಸ್ತುಗಳು.

ಶ್ರೀರಾಮಕೃಷ್ಣರು ಸಹ ತಮ್ಮ ಉಪದೇಶಗಳಲ್ಲಿ, ತಮ್ಮ ಉಪದೇಶಗಳು ಸಾಮಾನ್ಯರಿಗೆ ತಿಳಿಯುವಂತೆ ಹೇಳಲು ಅನೇಕ ರೀತಿಯಲ್ಲಿ ಪ್ರಾಣಿಪಕ್ಷಿಗಳನ್ನು ಉಪಯೋಗಿಸಿಕೊಂಡಿದ್ದಾರೆ. ಶ್ರೀರಾಮಕೃಷ್ಣರ ಉಪದೇಶಗಳು ಬಹಳ ಸರಳ ಹಾಗೂ ಬಹಳ ನೇರವಾಗಿವೆ. ಎಂತಹ ಸರಳ ಹೃದಯದವರನ್ನು ಸಹ ಸ್ಪರ್ಶಿಸಬಲ್ಲವು. ಶ್ರೀರಾಮಕೃಷ್ಣರು ತಮ್ಮ ಉಪದೇಶಗಳಲ್ಲಿ ಹೇಗೆ ಪ್ರಾಣಿ ಪಕ್ಷಿಗಳನ್ನು ಬಳಸಿಕೊಂಡಿದ್ದಾರೆ ಅಥವ ಅವುಗಳ ಸಹಾಯದಿಂದ ಅವರು ಅಧ್ಯಾತ್ಮಿಕ ತತ್ವಗಳನ್ನು ತಿಳಿಸಿದ್ದಾರೆ. **“ಶ್ರೀ ರಾಮಕೃಷ್ಣರ ಉಪದೇಶಗಳಲ್ಲಿ ಪ್ರಾಣಿ ಪಕ್ಷಿಗಳು”** ಎಂಬ ಶೀರ್ಷಿಕೆಯಡಿಯಲ್ಲಿ ನಾವು ಅವರ ಕೆಲವು ಉಪದೇಶಗಳನ್ನು ಪ್ರತಿ ತಿಂಗಳು ಕಾನನದಲ್ಲಿ ನೋಡುವ:

# ಕೇರೆ ಹಾವಿನ ಕತೆ



ಏತಕ್ಕಾಗಿ ನಾವು ಅರ್ಹತೆಯುಳ್ಳ ಶ್ರೇಷ್ಠ ಗುರುಗಳ ಬಳಿಗೆ ಹೋಗಬೇಕು, ಅಂತಹ ಗುರುಗಳ ಬಳಿಗೆ ಹೋಗದಿದ್ದರೆ ಅದರಿಂದ ಎಂತಹ ಅನಾಹುತವಾಗಬಹುದೆಂದು ಶ್ರೀರಾಮಕೃಷ್ಣರ ಕೇರೆ ಹಾವಿನ ಕತೆಯಲ್ಲಿ ಬಹಳ ಸೊಗಸಾಗಿ ಹೇಳಿದ್ದಾರೆ.

ಶ್ರೀರಾಮಕೃಷ್ಣರು ಹೇಳುತ್ತಾರೆ, ನಾನು ಒಂದು ಸಲ ಪಂಚವಟಿಯ ಮೂಲಕ ಸರ್ವೇಮರದ ತೋಪಿನಬಳಿಗೆ ಹೋಗುವಾಗ ಒಂದು ದೊಡ್ಡ ಕಪ್ಪೆ ಅರಚುತ್ತಾ ಇದ್ದುದ್ದನ್ನು ನೋಡಿದೆ, ಅದು ಯಾವುದೋ ಹಾವಿನ ಬಾಯಿಗೆ ಬಿದ್ದಿರಬಹುದೆಂದು ಭಾವಿಸಿದೆ, ಹಿಂತಿರುಗಿ ಬರುವಾಗಲೂ ಕಪ್ಪೆ ಕಿರುಚಿಕೊಳ್ಳುತ್ತಲೇ ಇತ್ತು.



ಏತಕ್ಕೆ ಎಂದು ನೋಡಿದಾಗ ಕೇರೆ ಹಾವಿನ ಬಾಯಿಗೆ ಕಪ್ಪೆ ಬಿದ್ದಿದೆ ಹಾವು ಅದನ್ನು ತಿನ್ನಲೂ ಆಗದು ಇತ್ತ ಕಕ್ಕಲು ಆಗದು, ಆಗ ಕಪ್ಪೆಯ ಗೋಳು ಹೇಳತೀರದು. ಅದೇನಾದರೂ, ನಾಗರ ಹಾವಿನ ಬಾಯಿಗೆ ಬಿದ್ದಿದ್ದರೆ ಮೂರು ಸಲ ವಟಗುಟ್ಟುವುದರೊಳಗಾಗಿ ಅದು ಸತ್ತೇ ಹೋಗುತ್ತಿತ್ತು. ಅದು ಕೇರೆ ಹಾವಾದ್ದರಿಂದ ಹಾವು, ಕಪ್ಪೆ ಎರಡೂ ಪ್ರಾಣ ಸಂಕಟ ಪಡಬೇಕಾಯ್ತು.

ನಿಜವಾದ ಗುರುವಿನ ಬಳಿಗೆ ಶಿಷ್ಯ ಹೋದರೆ ಮೂರು ವೇಳೆ ಶಬ್ಧಮಾಡುವುದರೊಳಗೆ ಶಿಷ್ಯನ ಅಹಂಕಾರ ನಾಶವಾಗುವುದು. ಗುರು ಏನಾದರೂ ಪೂರ್ಣತೆಯನ್ನು ಪಡೆಯದಿದ್ದರೆ ಶಿಷ್ಯನ ಅಹಂಕಾರವು ನಾಶವಾಗುವುದಿಲ್ಲ, ಜ್ಞಾನ ಲಭಿಸುವುದಿಲ್ಲ, ಪ್ರಪಂಚದ ಬಂಧನ ಕಳೆಯುವುದಿಲ್ಲ, ಗುರು ಶಿಷ್ಯರಿಬ್ಬರೂ ಸಹ ಕಷ್ಟಪಡಬೇಕಾಗುವುದು.



**ಪಾಠ :** ಗುರುಗಳ ಆಯ್ಕೆಯಲ್ಲಿ ನಾವು ಎಚ್ಚರ ವಹಿಸಬೇಕು.

- ಸ್ವಾಮಿ ಸೌಖ್ಯಾನಂದಜೀ ಮಹಾರಾಜ್

# ಕಕ್ಕೆ ಮರ

## Cassia fistula L

ಬೇಸಿಗೆಯ ರಜೆಗೆ ನಮ್ಮೂಳ್ಳಿಯ ಮಕ್ಕಳಿಗೆ ಒಂದು ವಾರದ ನಿಸರ್ಗ ಶಿಬಿರ ಏರ್ಪಡಿಸಿದ್ದೆವು. ಪಕ್ಕದ ಹಳ್ಳಿಯ ಬುಡಕಟ್ಟು ಜನಾಂಗಕ್ಕೆ ಸೇರಿದ ಹಾಗು ಸಸ್ಯಗಳ ಬಗ್ಗೆ ಅಪಾರವಾಗಿ ತಿಳಿದಿರುವ ಶಿವಣ್ಣನನ್ನು ಮರಗಳ ಬಗ್ಗೆ ಒಂದು ಕ್ಲಾಸ್ ತಗೋಳಿ ಎಂದು ಕೇಳಿಕೊಂಡೆವು. ಅವರು ಒಪ್ಪಿ ಶಿಬಿರಕ್ಕೆ ಬರುವಾಗ ನೂರಾರು ತರದ ಎಲೆಗಳನ್ನು ತಂದು ತೋರಿಸುತ್ತಾ, ಅ ಸಸ್ಯದ ವಿವರಣೆ, ಅದರ ಔಷಧಿಯ ಉಪಯೋಗ ಎಲ್ಲವನ್ನು ತಿಳಿಸಿಕೊಟ್ಟರು.

ಶಿವಣ್ಣ: ಕಕ್ಕೆದುಂಬಿ ಎಲ್ಲಾರು ನೋಡಿದ್ದೀರಲ್ಲ?

ಮಕ್ಕಳು: ಹೌದು. ಎಂದರು.



"ನೋಡಿ ಈ ಕಕ್ಕೆ ದುಂಬಿ ಅಥವಾ ಜೀರ್ಜಿಂಬೆ ಈ ಕಕ್ಕೆ ಮರದ ಎಲೇನೇ ತಿಂದು ಬದುಕುತ್ತದೆ. ಈ ಮರ ಇಲ್ಲ ಅಂದ್ರೆ ಆ ದುಂಬಿ ಇಲ್ಲ! ಇದು ಉದ್ದುದ್ದ ನುಗ್ಗೆ ಕಾಯಿ ತರದ ಕಾಯಿ ಬಿಡುತ್ತದೆ. ಈ ಕಾಯಿಯನ್ನು ಸೀಳಿ ಅದರೊಳಗಿನ ಬೀಜಗಳನ್ನು ತಿನ್ನಲು ಗಿಳಿಗಳಿಂದ ಮಾತ್ರ ಸಾಧ್ಯ. ಯುಗಾದಿ ಟೈಂಗೆ ಹರಿಶಿಣಾ ಹೂ ಬಿಟ್ಟರೆ ಗೊಂಚಲು ಗೊಂಚಲು ನ್ಯಾತಾಡ್ತಾ ಇರ್ತವೆ" ಎಂದು ಹೇಳಿ ಎದೆ ನೋವಿಗೆ ಇದರ ಚಕ್ಕೆ ಔಷಧಿಗೆ ಬರುತ್ತದೆ ಎಂದು ತಿಳಿಸಿಕೊಟ್ಟರು.

ನಾನು ಕಾಲೇಜಿನಲ್ಲಿ ಓದುವಾಗ *ಸಿಸಾಲ್ಪಿನೇಸಿ* ಜಾತಿಗೆ ಸೇರಿದ್ದು ಎಂದು ಹೇಳಿ ಅರ್ಥವಾಗದಂತೆ ತಿಳಿಸಿದ ಗುರುಗಳಿಗೂ ಇಡೀ ಮರದ ಗುಣಲಕ್ಷಣವನ್ನೇ ವರ್ಣಿಸಿದ ಶಿವಣ್ಣನಿಗೂ ಎತ್ತಲಿಂದ ಎತ್ತಲ ಸಂಬಂಧ. ಸುಮಾರು ಹತ್ತು ಅಡಿ ಎತ್ತರ ಬೆಳೆಯುವ ಈ ಕಕ್ಕೆ ಮರಕ್ಕೆ ಕಡಿಮೆ ನೀರಿದ್ದರೂ ಸಾಕು ಬೆಳೆಯುತ್ತದೆ. ಈ ಮರದ ತೊಗಟೆ, ಎಲೆ, ಬೀಜ ಹಾಗು ಬೇರನ್ನು ಔಷಧವಾಗಿ ಬಳಸುತ್ತಾರೆ. ಏಪ್ರಿಲ್ ತಿಂಗಳಲ್ಲಿ ತನ್ನ ಎಲೆಗಳನ್ನೆಲ್ಲಾ ಉದುರಿಸಿ ಸುವರ್ಣ ಹಳದಿಯ ಬಣ್ಣದ ಹೂಗಳನ್ನು ಗೊಂಚಲು ಗೊಂಚಲಾಗಿ ಬಿಟ್ಟರೆ ಇದೊಂದು ಅಲಂಕಾರಿ ಮರವೂ ಹೌದು ಎಂದೆನಿಸುತ್ತದೆ.

ನಮಗೆ "ಹಿತ್ತಲ ಗಿಡ ಮದ್ದಲ್ಲ. ಕಕ್ಕೆಕಾಯಿ ದೊಣ್ಣೆಯಲ್ಲ" ಎಂಬಂತೆ ಬೇರೆ ದೇಶದಿಂದ ತಂದ ಅಲಂಕಾರಿಕ ಮರಗಳನ್ನು ಇಲ್ಲಿ ನೆಡುತ್ತೇವೆ. ನಮ್ಮದೇ ಆದ ಕಕ್ಕೆಯನ್ನು ಕಡಿದು ಸೌದೆಗೋ ಬಾಗಿಲಿಗೋ ಬಳಸಿಬಿಡುತ್ತೇವೆ. ಈ ಮರದ ಎಲೆಗಳನ್ನು ಸಾವಯವ ಕೃಷಿಯಲ್ಲಿ ಕೀಟ ನಾಶಕದಂತೆ ಕೂಡ ಬಳಸುತ್ತಾರೆ ಎಂದು ಕಕ್ಕೆಯ ಬಗ್ಗೆ ಹುಡುಗರಿಗೆ ಹೊಸಲೋಕವನ್ನೆ ತಿಳಿಸಿಕೊಟ್ಟರು. ಹೀಗೆ ಹಲವು ಸ್ಥಳೀಯ ಮರಗಳ ಬಗ್ಗೆ ತಿಳಿಸಿದರು. ಮಕ್ಕಳಿಗೆ ಅವುಗಳನ್ನು ಕಡಿಯದೇ ಮುಂದಿನ ಪೀಳಿಗೆಗೆ ಉಳಿಸಿ ಎಂದು ಸಹ ಬುದ್ಧಿ ಹೇಳಿದರು.

- ಶಂಕರಪ್ಪ ಕೆ.ಪಿ



# ಹಕ್ಕಿ ಲೋಕ

★ ನವರಂಗದ ಬೆಂಗ್ಳೂರು

ವೈಜ್ಞಾನಿಕ ಹೆಸರು : ***Pitta brachyura***

ಇಂಗ್ಲೀಷ್ ಹೆಸರು : **Indian Pitta**

ಒಂದು ದಿನ ಸುಬ್ಬನ್ ಸಾಬಿ ಹೆಗಲ ಮೇಲೆ ಉದ್ದನೆಯ ಕೋಲು, ಕೈಯಲ್ಲಿ ಪ್ಲಾಸ್ಟಿಕ್ ಡಬ್ಬ ಎತ್ತಿಕೊಂಡು ಓಡೋಡಿ ಬರುವುದು ಕಾಣಿಸಿತು. ಅವನು ಬರುತ್ತಿರುವ ಆತುರ ನೋಡಿದರೆ ಏನೋ ಇರಬೇಕೆಂದು ಅನಿಸಿತು. ನೇರ ನನ್ನ ಬಳಿ ಬಂದವನೆ ಆತುರದಿಂದ ’ಬೇಗ ಬಾಪ್ಪ, ಮರಿಗ ಹೇಳ್ದ. . .! ಕಾಡಾಗ, ಚಿಕ್ಕರಾಗಳ್ಳಿ ಬೆಟ್ಟತ್ತಾವ ಕೆರೆ ಅಯ್ತಂತೆ, ಅದ್ರಾಗಾ ಬರ್ರೀ ಮೀನುಗ್ಳೆ ಅವಂತೆ, ನಿಮ್ದುಕ್ಕೆ ಬೇಗ ಬಂದ್ರೆ ಹಾಗೋಗಿ ಹಿಂಗ್ಬಂದ್ಬಿಡೋಣ ಮಾರಾಯ’ ಎಂದ. ’ಇಲ್ಲ ನನ್ಗೆ ಕೆಲ್ಸ ಇದೆ ಬರೋಕೆ ಹಾಗಲ್ಲ’ ಎಂದೆ. ಇಲ್ಲ ಅಸ್ವಥಪ್ಪ ಅಲ್ಲನ ಮೇಲೆ ಆಣೆ ದಪ್ಪದಪ್ಪ ಮೀನುಗ್ಳು. . .! ಬರ್ಬೇಕು ನನ್ಗೆ ಕಾಡಗ ಆನೆ ಭಯ, ಬರ್ಲಿಲ್ಲ ಅಂದ್ರೆ ಈವತ್ತು ಮೀನಿಲ್ಲ’ ಎಂದು ಬೇಸರದ ಮುಖ ಮಾಡಿಕೊಂಡ, ಹೋಗ್ಲಿ ಹೋಗ್ಬರೋಣ ಎಂದು ಸುಬ್ಬನ್ ಸಾಬಿ ಜೊತೆ ಹೊರಟೆ.



“ಸುಬ್ಬನ್, ಬೆಳಗ್ಗೆ ಫಾರೆಸ್ಟ್ ವಾಚರ್ ಗುಟ್ಟಿ ಸಿಕ್ಕಿದ್ದ, ಕಾಡಲ್ಲಿ ತುಂಬ ಆನೆಗಳಿದವಂತೆ ಫಯರ್ ಲೈನ್ನಲ್ಲಿ ಹೋಗೋದು ಬೇಡ, ಹೀಗೆ ಉಪ್ಪುನೀರಳ್ಳದಲ್ಲಿ ಹೋಗೋಣ” ಎಂದೆ. ಸುಬ್ಬನ್ ಸಾಬಿಗೆ ಹಾಗೆ ಹೇಳಿದ ತಕ್ಷಣ ಮೀನು ತಿನ್ನೋ ಆಸೆ ಅರ್ಧ ಕಡಿಮೆಯಾಗಿ ’ಅಲ್ಲ ಅಸ್ವಥಪ್ಪ ಕಾಡಾಗ ಜಾಸ್ತಿ ಆನೆ ಅವೆ ಅಂದ್ರೆ ಹೋಗೋದ್ ಬ್ಯಾಡ. . .!, ಇಲ್ಲೇ ನಮ್ಮಕೆರೆಲ್ಲೆ ಇದ್ದ್ರೆ ಆಯ್ತು’ ಎಂದ. ನಂಗೆ ಬಾರಿ ಕೋಪ ನೆತ್ತಿಗೇರ್ತು, “ಹೋ. . .ಸರಿ ಮಾರಾಯ ನೀನೂನು! ಅದ್ದೇಲ್ಲ ಗೊತ್ತಿಲ್ಲ ಮುಚ್ಕೊಂಡು ಬಾ ಈಗ ನನ್ನಿಂದೆ” ಎಂದು ಬೆದರಿಸಿ ಉಪ್ಪುನೀರಳ್ಳದಲ್ಲಿ ಕರೆದುಕೊಂಡು ಹೊರಟೆ. ಆ ಬೇಸಿಗೆಯಲ್ಲಿ ಕಾಡಲ್ಲಿ ಸುಮಾರು ಆರೇಳು ಕಿಲೋ ಮೀಟರ್ ನಡೆದು ಸಾಗಬೇಕು, ಬೇಸಿಗೆ ಶುರುವಾಗಿ ಎರಡು

ತಿಂಗ್ಳಾಗಿ ಹಳ್ಳದ ನೀರು ಕಡಿಮೆಯಾಗಿ ಅಲ್ಲಲ್ಲಿ ಅಲ್ಪಸ್ವಲ್ಪ ನೀರು ನಿಂತಿತ್ತು, ಆ ಗುಂಡಿಗಳಲ್ಲಿ ನೀರೆಲ್ಲ ಕರಗಿ ಹೋಗಿ ಕೆಸರು ನೀರು ಮಾತ್ರ ಉಳಿದುಕೊಂಡಿದ್ದ ನೀರಿನಲ್ಲಿ ಸಣ್ಣಸಣ್ಣ ಪುಡಿ ಮೀನುಗಳನ್ನು ನೋಡಿದ ಸುಬ್ಬನ್ ಸಾಬಿ "ಹೋ. . .ಎಷ್ಟೊಂದ್ ಮೀನ್ಗುಳು ಮಾರಾಯ! ಇಲ್ಲೆ ಇಡ್ಕೊಂಡೊಗಾನ" ಎಂದು ರಾಗ ಎಳೆಯುತ್ತಿದ್ದ. ಅವನಿಗೆ ಆನೆ ಭಯ ಪಾಪ ಏನ್ಮಾಡಕಾಗೂತ್ತೆ, ನಾನು ಬೀಡೊನಲ್ಲ.




ಚಿಕ್ಕರಾಗಳ್ಳಿ ಬೆಟ್ಟ ತಲುಪೊದ್ರೊಳಗೆ ನನ್ನನ್ನು ಮತ್ತು ಕಾಡ್ ಕೆರೇಲಿ ಮೀನುಗಳು ಇವೆ ಎಂದು ಹೇಳಿದ ಮರಿಗನನ್ನು ಅದೆಷ್ಟು ಸಾರಿ ಬಯ್ದುಕೊಂಡನೋ ಏನೋ ಆಗಾಗ ಅದೇನನ್ನೋ ಗೊಣಗಿಕೊಳ್ಳುತ್ತಿದ್ದ, ಕೇಳಿದರೆ ಏನು ಇಲ್ಲ ಆನೆ ಏನಾದ್ರು ಇದಾವ? ಎಂದು ಕೇಳುತ್ತಿದ್ದ.

ಕಾಡಗ ಇರೋ ಆ ಕೆರೆಯನ್ನು ನೋಡಿದ್ದು ಅದೇ ಮೊದಲು, ಕಾಡಿನ ಮಧ್ಯದಲ್ಲಿ ಹರಿಯುವ ಸುದ್ದಳ್ಳಕ್ಕೆ ಅಡ್ಡಲಾಗಿ ಕಟ್ಟೆಕಟ್ಟಿ ಬೇಸಿಗೆಯಲ್ಲಿ ಕಾಡುಪ್ರಾಣಿಗಳಿಗೆ ನೀರಿರಲೆಂದು ಫಾರೆಸ್ಟ್ರಿನವರು ಕಟ್ಟಿರುವ ಕೆರೆ. ಸುತ್ತಲೂ ಎತ್ತೆತ್ತರಕ್ಕೆ ಬೆಳೆದಿರುವ ಮರಗಳು, ಕೆರೆಯ ಎದುರಿಗೆ ಚಿಕ್ಕರಾಗಳ್ಳಿ ಬೆಟ್ಟ, ಎರಡು ಕಡೆ ನೀರುಹರಿಯುವ ಹಳ್ಳ, ಒಂದು ಬದಿಯಲ್ಲಿ ದಟ್ಟವಾದ ಕಾಡು. ಅರ್ಧ ಗಂಟೆ ಗಾಳ ಹಾಕಿಕುಳಿತ್ತಿದ್ರು, ನನಗಿಂತ ಐಕ್ಲಾಸ್ ಆಗಿ ಮೀನು ಹಿಡಿಯೋನು, ಹಿಡಿಯದೆ ಆ ಕಡೆ, ಈ ಕಡೆ ನೋಡುತ್ತಾ ಗಾಳವನ್ನು ಒಂದೇ ಕಡೆ ಬಿಡದೆ ಆಡಿಸುತ್ತಾ ಕುಳಿತ್ತಿದ್ದ, ಇನ್ನೆಲ್ಲಿ ಸಿಕ್ಕೀತು ಮೀನುಗ್ಳು, ಸುಬ್ಬನ್ ಸಾಬಿಗೆ ಯಾವ ಕಡೆಯಿಂದ ಯಾವಾಗ ಆನೆ ಬರುತ್ತೋ ಎಂಬ ಭಯ!.

ನನ್ನ ಪಾಡಿಗೆ ನಾನು ಗಾಳ ಹಾಕಿಕುಳಿತಿದ್ದೆ, ಸುಬ್ಬನ್ ಸಾಬಿ ಮೆಲು ಧ್ವನಿಯಲ್ಲಿ 'ಅಸ್ವಥಪ್ಪ. . .ಅಸ್ವಥಪ್ಪ. . .!' ಎಂಬ ಶಬ್ಧ ಮೆಲ್ಲನೆ ಆ ನಿರಾವ ಕಾಡಿನ ತೆಳುಗಾಳಿಯಲ್ಲಿ ತೇಲಿ ಬಂದು ಕಿವಿಗೆ ಬಡಿಯಿತು. ಗಾಭರಿಯಿಂದ ಎಲ್ಲೋ ಆನೆ-ಗೀನೆ ಬಂದಿರಬೇಕು ಎಂದು ತಲೆ ಎತ್ತಿ ಏನು? ಎಂಬಂತೆ ತಲೆಯನ್ನು ಒಂದು ಸಾರಿ ಮೇಲಕ್ಕೂ ಕೆಳಕ್ಕೂ ಆಡಿಸಿದೆ. ಸುಬ್ಬನ್ ಸಾಬಿಯು 'ಅಸ್ವಥಪ್ಪ ಯಾವುದೋ ಹೊಸ ಹಕ್ಕಿ ಹೀಗ್ ಹೊಯ್ತು' ಎಂದು ಹೇಳಿದ. ಗಾಳವನ್ನು ಅಲ್ಲಿಯೇ ಬಿಟ್ಟು ಎದ್ದು ಬಂದೆ 'ಸುಬ್ಬನ್ ಎಲ್ಲ' ಎಂದೆ, ಕೈಯನ್ನು ಆ ಕಡೆ ತೋರಿಸಿದ, ಮರ, ಪೊದೆಗಳ ಬುಡದಲ್ಲಿ ಬಿದ್ದಿರುವ ತರಗೆಲೆಗಳ ನಡುವೆ ಕುಪ್ಪಳಿಸುತ್ತಾ ಕೀಟಗಳನ್ನು ಹಿಡಿಯುತ್ತಾ ಕ್ರಮಿಸುತ್ತಿದ ದೃಶ್ಯ ಅದ್ಭುತವಾಗಿತ್ತು. ಆ ಹಕ್ಕಿಯನ್ನು ನಾನು ಕೂಡ ಅದೇ ಮೊದಲ ಬಾರಿ ನೋಡಿದ್ದು. ಅದು ನೋಡಲು ಬಲು ಬಣ್ಣದಾಗಿತ್ತು. ನನಗೆ ತಿಳಿದಿರಲ್ಲಿಲ್ಲ ಅದು ಭಾರತದ ಅತೀ ಸುಂದರ ಪಕ್ಷಿಗಳಲ್ಲಿ ಒಂದು ಎಂದು.

ನೋಡಲು ಗೊರವಂಕಕ್ಕಿಂತ ಚಿಕ್ಕದಾದ ವಿವಿಧ ಬಣ್ಣಗಳಿಂದ ಕೂಡಿದ ಅತ್ಯಾಕರ್ಷಕ ಪಕ್ಷಿ. ಪ್ರಧಾನವಾಗಿ ತಿಳಿಹಳದಿ ಮತ್ತು ಹಸಿರು ಬಣ್ಣದ ಹಕ್ಕಿ, ರೆಕ್ಕೆಗಳ ಮೇಲೆ ಹಸಿರು, ನೀಲಿ; ನೆತ್ತಿ ಮತ್ತು ಕಣ್ಣಿನ ಇಬ್ಬದಿಯಲ್ಲಿ ಕಪ್ಪು

ಪಟ್ಟೆಯಿದ್ದು, ಹುಬ್ಬುಗಳು, ಗದ್ದ, ಬಿಳಿಬಣ್ಣದ್ದು, ಬಾಲದ ತಳಭಾಗ ಕೆಂಪುಬಣ್ಣ, ಕಾಲುಗಳು ಸಣ್ಣಗೆ ಕಂದು ಬಣ್ಣದ್ದು, ಕೊಕ್ಕು ಕಪ್ಪು ಮಿಶ್ರಿತ ಕಂದುಬಣ್ಣ, ಕಪ್ಪಂಚಿನ ರೆಕ್ಕೆ ಮೇಲಿನ ಬಿಳಿ ಮಚ್ಚೆ ಹಾರುವಾಗ ಸ್ಪಷ್ಟವಾಗಿ ಕಾಣುತ್ತಿತ್ತು.

ಅದೆಲ್ಲ ನನ್ನ ತಲೆಯ ಹಾರ್ಡಿಸ್ಕಿನಲ್ಲಿ ಹಾಗೆ ಕುಳಿತಿತ್ತು, ಎಂದಾದರೂ ಮತ್ತೆ ಸಿಕ್ಕಿತೇ ಈ ಹಕ್ಕಿ? ಎಂದು. ಆದರೆ ಏಳೆಂಟು ವರ್ಷಗಳಾದರೂ ಆ ಹಕ್ಕಿ ಸಿಗಲೇ ಇಲ್ಲ. ಇವುಗಳನ್ನು ಹಲವಾರು ಹೆಸರುಗಳಿಂದ ಕರೆಯುತ್ತಾರೆ, ಇಂಗ್ಲೀಷ್ನಲ್ಲಿ ಇಂಡಿಯನ್ ಪಿಟ್ಟಾ (Indian Pitta), ಕನ್ನಡದಲ್ಲಿ ನವರಂಗ, ಸ್ಥಳೀಯವಾಗಿ ನೆಲಗುಪ್ಪ, ಪೊನ್ನಂಗಿ ಹಕ್ಕಿ, ಹನಾಲು ಗುಬ್ಬಿ, ನೆಲಪಕ್ಕಿ ಎಂದೆಲ್ಲ ಕರೆಯುವುದು ವಾಡಿಕೆ.

ಇಂಡಿಯನ್ ಪಿಟ್ಟಾಗಳು ಸಾಮಾನ್ಯವಾಗಿ ಹುಲ್ಲುಕಡ್ಡಿ, ನಾರುಗಳಿಂದ ಕೂಡಿದ ಬಟ್ಟಲಿನಾಕಾರದ ಗೂಡನ್ನು ಪೊದೆಗಳ ಕವಲುಗಳಲ್ಲಿ ಕಟ್ಟಿ, ನೇರಳೆ ಚುಕ್ಕೆಗಳಿರುವ ನಾಲ್ಕೈದು ಬಿಳಿ ಮೊಟ್ಟೆಗಳಿಟ್ಟು ಮರಿ ಮಾಡುತ್ತವೆ. ನಮ್ಮ ರಾಜ್ಯದೆಲ್ಲೆಡೆ ಕಂಡರೂ ಕಣ್ಣಿಗೆ ಕಾಣುವುದು ತುಂಬ ಅಪರೂಪ. ನನಗೆ ಒಂದೇ ಸಾರಿ ಸಿಕ್ಕಿದ್ದು ಅದೇ ಮೊದಲು ಕಂಡದ್ದು, ಅದೇ ಕೊನೆಯೂ ಕೂಡ. ಸುಮಾರು ಏಳೆಂಟು ವರ್ಷಗಳು ಸಿಗಲೇ ಇಲ್ಲ. ಮೊನ್ನೆಯಷ್ಟೆ ಗೆಳೆಯ ಮದನ್ ಕಡೆಯಿಂದ ಪೋನ್ ಬಂತು. "ನಮ್ಮನೆ ಪಕ್ಕದಲ್ಲಿರುವ ಫ್ಯಾಕ್ಟರಿಯ ಫ್ಯಾನಿಗೆ ಇಂಡಿಯನ್ ಪಿಟ್ಟಾ ಹಕ್ಕಿ ಡಿಕ್ಕಿ ಹೊಡೆದು, ರೆಕ್ಕೆಗೆ ಪೆಟ್ಟು ಬಿದ್ದಿದೆ. ಇದನ್ನು ಎಲ್ಲಿಯಾದರು ರೆಸ್ಕ್ಯು ಸೆಂಟರ್ ಪರಿಚಯವಿದ್ದರೆ ಹೇಳು" ಎಂದು ಕೇಳಿದ, ಅದೆಲ್ಲ ಬೇಡ! ಎಷ್ಟು ಪೆಟ್ಟಾಗಿದೆ ಹೇಳು, ಸ್ವಲ್ಪ ಆಗಿದ್ದರೆ ಎರಡು-ಮೂರು ದಿನ ನಮ್ಮ ಬಳಿಯೆ ಇಟ್ಟುಕೊಂಡು ಬಿಟ್ಟರಾಯಿತು ಎಂದು ಹೇಳಿದೆ, ಈಗಾಗಲೆ ಹಕ್ಕಿ ಸಿಕ್ಕಿ ಎರಡು ದಿನವಾಗಿದೆ, ಅದು ಊಟ-ನೀರು ಬಿಟ್ಟಿದೆ, ನಾನು ಸ್ವಲ್ಪ ಮೊಟ್ಟೆ ತಿನ್ನಿಸಿದ್ದೇನೆ, ಏನಾದರೂ ಮಾಡಬೇಕು ನೋಡು!, ಎಂದು ಹೇಳಿದ.

ಈ ಇಂಡಿಯನ್ ಪಿಟ್ಟಾಗಳು ಏನನ್ನು ತಿನ್ನುತ್ತವೆ? ಸಸ್ಯಹಾರಿಯೋ ಮಾಂಸಹಾರಿಯೋ ಯಾರಿಗೆ ಗೊತ್ತು!, ಆದರೂ ಅದು ನಾವು ಕೊಟ್ಟ ಆಹಾರವನ್ನು ಮುಟ್ಟಬೇಕಲ್ಲ. ಇರಲಿ ನೋಡೋಣ ಎಂದು ನಾನೇನು ಸುಮ್ಮನೆ ಕೂರಲಿಲ್ಲ, ಮೊದಲೇ ಅದು ನನಗೆ ಇಷ್ಟವಾದ ಹಕ್ಕಿ, ತಕ್ಷಣ ಫ್ರೆಂಡ್ ಮುರಳಿಗೆ ಪೋನ್ ಮಾಡಿ ವಿಚಾರವೆಲ್ಲವನ್ನು ಮುಟ್ಟಿಸಿ ಬೆಂಗಳೂರಿನ ಕೆಂಗೇರಿಯ ಬಳಿ ಇರುವ "*ಪೀಪಲ್ ಫಾರ್ ಅನಿಮಲ್*" ಸಂಸ್ಥೆಯಲ್ಲಿ ಪ್ರಾಣಿ-ಪಕ್ಷಿಗಳನ್ನು ಚನ್ನಾಗಿ ನೋಡಿಕೊಳ್ಳುತ್ತಾರೆಯಂತೆ ಅಲ್ಲಿ ಕೊಟ್ಟರೆ ಹೇಗೆ ಎಂದು ಕೇಳಿದೆ. "ಯಾರಿಗು ಕೊಡುವುದು ಬೇಡ, ನಾವೆ ಕಾಡಿಗೆ ಬಿಟ್ಟರಾಯಿತು, ಅಲ್ಲಿ ಚನ್ನಾಗಿ ನೋಡಿಕೊಳ್ಳುತ್ತಾರೆ ಸರಿ, ಆದರೆ ಹಕ್ಕಿಗೆ ಗುಣವಾದ ಮೇಲೆ *ಝೂ* ಗೆ ಕೊಡುತ್ತಾರೆ, ಅಲ್ಲಿ ಹಕ್ಕಿ ಸ್ವಾತಂತ್ರ್ಯವಾಗಿರಲು ಆಗುವುದಿಲ್ಲ, ಕೊಡೋದು ಬ್ಯಾಡ" ಎಂದರು.

ಆ ಹಕ್ಕಿಯನ್ನು ಎರಡು-ಮೂರು ದಿನ ಸುಧಾರಿಸುವುದು ತುಂಬ ಕಷ್ಟ ಸತ್ತರೆ ತೊಂದರೆ, ಏನು ಮಾಡುವುದು ಎಂದು ಯೋಚಿಸುತ್ತಾ "ಕೋಸ್ಟಲ್ ಕರ್ನಾಟಕ ಬರ್ಡ್ವಾಚರ್ಸ್ ನೆಟ್ವರ್ಕ್ ಗ್ರೂಫ್" ಅವರ ಫೇಸ್ ಬುಕ್ ನಲ್ಲಿ ಸಲಹೆಯನ್ನು ಕೇಳಿದೆ. ಅವರ ಹಿಂಬರಹ ಬರುವುದರೊಳಗೆ ಗೆಳೆಯ ರಾಜ್ ಪವನ್ "ಬನ್ನೇರುಘಟ್ಟ ರೀಹ್ಯಾಬಿಲಿಟೇಶನ್ ಸೆಂಟರ್" ಡಾಕ್ಟರ್ ಒಬ್ಬರು ನನಗೆ ಗೊತ್ತು ಅಲ್ಲಿ ನೀಡಿದರಾಯಿತು, ಅಲ್ಲಿ ನಾವು ಯಾವಾಗ ಬೇಕಾದರು ಹೋಗಿ ನೋಡಿಕೊಂಡು ಬರಬಹುದು, ಕಾಡಿಗೆ ಬಿಡಬೇಕಾದರೂ ಸಹ ಜೊತೆಯಲ್ಲಿ ಹೋಗಬಹುದು ಎಂದು ಹೇಳಿದ. ಏನೂ ಮಾಡುವುದು ಎಂದು ಯೋಚಿಸುತ್ತಿರಬೇಕಾದರೆ ಸಂಜೆ ರೀಹ್ಯಾಬಿಲಿಟೇಶನ್ ಸೆಂಟರ್ ನಿಂದ ಪೋನ್ ಬಂತು. ಹಕ್ಕಿಯನ್ನು ತನ್ನಿ ನಾವು ಚಿಕಿತ್ಸೆ ಮಾಡುತ್ತೇವೆ ಎಂದು ಹೇಳಿದರು.

ನಾನು, ಶಂಕರಪ್ಪ ಮತ್ತು ಮದನ್ ಹಕ್ಕಿಯನ್ನು ತೆಗೆದುಕೊಂಡು ಹೋಗುವುದರಲ್ಲಿ ಸಂಜೆ ಏಳಾಗಿ ಪಶ್ಚಿಮದಲ್ಲಿ ಸೂರ್ಯ ಮುಳುಗಿ ಕತ್ತಲಾಗಿತ್ತು. ಹಕ್ಕಿಯ ರೆಕ್ಕೆಯನ್ನು ಪರೀಕ್ಷಿಸಿ ಡೆಟಯಲ್ ನಿಂದ ರೆಕ್ಕೆಯನ್ನು ಶುಚಿ ಮಾಡುತ್ತಿದ್ದರು, ಹಕ್ಕಿ ನೋವಿಗೆ ತಾಳಲಾರದೆ "*ವೀ. . ಟ್ವೀ. . .ವೀ. . ಟ್ವೀ. . .*" ಎಂದು ಮೆಲುಧ್ವನಿಯಲ್ಲಿ ಕೂಗುತ್ತಿತ್ತು. ಶಂಕರಪ್ಪ

“ಹೋ. . . ಈ ವಪ್ಪ ಕ್ಲೀನ್ ಮಾಡೋದ್ ನೋಡ್ದ್ರೆ ಹಕ್ಕಿನ ಸಾಯ್ಸಾಕ್ತಾನೇ” ಎಂದು ಗೊಣಗುತ್ತಿದ್ದ. ಜೋರಾಗಿ ಪೆಟ್ಟು ಬಿದ್ದಿದೆ ಎಂದು ರೆಕ್ಕೆಯನ್ನು ತೋರಿಸಿ “ನೋಡಿ ರೆಕ್ಕೆಯಲ್ಲ ತಿಂದಾಕಿದೆ ತುಂಬ ನೋವು ಇರಬಹುದು”, ಎಂದು ಆಂಟಿಬಯೋಟಿಕ್ ಇಂಜಕ್ಷನ್ ಕೊಟ್ಟು, “ಎರಡು ದಿನದಿಂದ ಊಟಮಾಡಿಲ್ಲ ತುಂಬ ಸುಸ್ತಾಗಿದೆ”, ಎಂದು ಗ್ಲೂಕೋಸ್ ಇಂಜಕ್ಷನ್ ಹಾಕಿ, ಗಾಯ ವಾಸಿಯಾಗಲು ಕ್ರೀಮ್ ಹಚ್ಚಿ ಹಕ್ಕಿಯನ್ನು ಪಂಜರದಲ್ಲಿ ಬಿಟ್ಟರು. ಮತ್ತೆ ಎರಡು ದಿನ ಬಿಟ್ಟು ಶಂಕರ ಫೋನ್ ಮಾಡಿ ಕೇಳಿದ “ ಅದೆ ಮೊನ್ನೆ ಇಂಡಿಯನ್ ಪಿಟ್ಟಾ ತಂದಿದ್ರಲ್ಲ ಅವರು ಸಾರ್ ನಾವು! ಹೇಗಿದೆ ಹಕ್ಕಿ ಎಂದು ಕೇಳಿದ”. “ಹೋ. . .ಸಾರ್ ಅದು ಲಿವರ್ ಹಾಳಾಗಿ ನೆನ್ನೆ ಸಂಜೆ ಸತ್ತೋಯ್ತು”. ಎಂಬ ಫೋನಿನ ಶಬ್ಧ ಮೆಲ್ಲನೇ ನನ್ನ ಕಿವಿಗೆ ಬಂದು ತಲುಪಿತು. ಮುರಳಿ ಹೇಳಿದ ಹಾಗೆ ಕಾಡಿಗೆ ಬಿಟ್ಟಿದ್ದರೆ!, ಉಳಿದುಕೊಳ್ಳುತ್ತಿತ್ತೊ ಏನೋ!, ಎಂದು ಸಂತಾಪ ಪಟ್ಟುಕೊಂಡ ಶಂಕರಪ್ಪ. ಮದನ್ ತುಂಬ ಬೇಸರ ಪಟ್ಟುಕೊಂಡ, ತುಂಬ ಅಪರೂಪ ಎಂದಿದ್ದ ನನಗೆ ಇಂಡಿಯನ್ ಪಿಟ್ಟಾ ನಮ್ಮೂರಿನ ಬಳಿ ತುಂಬ ಇದ್ದವೆ ಯಾವಾಗಾದರೂ ಒಂದು ಸಾರಿ ಬನ್ನಿ ನೋಡಬಹುದು, ಫೋಟೋ ತೆಗೆಯಬಹುದು, ಎಂದು ಗೆಳೆಯ ಮದನ್ ಹೇಳಿದ. ಇನ್ನೊಂದು ನನಗೆ ಆಶ್ಚರ್ಯವಾಯಿತು ಇಂತಹ ಬನ್ನೇರುಘಟ್ಟ ಕಾಡಿನಲ್ಲಿ ಕಂಡದ್ದು ಒಂದೇ ಬಾರಿ!, ಆದರೆ ಅಂತಹ ಮಹಾನಗರ ಬೆಂಗಳೂರಿನಲ್ಲಿ ಇಂಡಿಯನ್ ಪಿಟ್ಟಾ ನೋಡಲು ಕರೆಯುತ್ತಿರುವ ಮದನ್ ಸುಳ್ಳು ಹೇಳುತ್ತಿರಬಹುದು ಎಂದೆನಿಸಿದರು ಅದು ಸತ್ಯ!. ಬೆಂಗಳೂರಿನಲ್ಲೂ ಇಂತಹ ಅಪರೂಪದ ಹಕ್ಕಿಗಳು ಇವೆ ಎಂದಾದರೆ ಅವುಗಳ ಆವಾಸವನ್ನು ಮತ್ತು ಅವುಗಳನ್ನು  ಸಂರಕ್ಷಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ ಕೂಡ.



- ಅಶ್ವಥ ಕೆ.ಎನ್

# ವಿದ್ಯಾರ್ಥಿಗಾಗಿ ವಿಜ್ಞಾನ

## * ಮಮುತ್ ಆನೆ



ರಷ್ಯದ 11ವರ್ಷದ ಬಾಲಕನೊಬ್ಬ ತನ್ನ ಮನೆಯ ಬಳಿ ಸುತ್ತಾಡುವಾಗ ನೆಲದಲ್ಲಿ ಯಾವುದೊ ಪ್ರಾಣಿಯ ಕಾಲುಗಳು ಹೆಪ್ಪುಗಟ್ಟಿರುವುದನ್ನು ಗಮನಸಿ ಅದನ್ನು ತನ್ನ ಪೋಷಕರಿಗೆ ತಿಳಿಸಿದ ಅವರು ವಿಜ್ಞಾನಿಗಳಿಗೆ ತಿಳಿಸಿದರು. ವಿಜ್ಞಾನಿಗಳು ಅದನ್ನು ಅಗೆದಾಗ 30,000 ಸಾವಿರವರ್ಷದ ಹಿಂದೆ ಬದುಕಿದ್ದ ಉಲ್ಲಿ ಮಮುತ್ ಆನೆ ಎಂದು ತಿಳಿಸಿದರು. ಈ ಶತಮಾನದಲ್ಲಿ ಆವಿಷ್ಕಾರಗೊಂಡ ಉಲ್ಲಿ ಮಮುತ್ ಆನೆಗಳಲ್ಲಿ ಅತ್ಯಂತ ದೊಡ್ಡದು.

ಈ ಉಲ್ಲಿ ಮಮುತ್ ಆನೆ ಪಳವಳಿಕೆಗೆ (ಜಿನ್ಯ) ಎಂದು ನಾಮಕರಣ ಮಾಡಿದ್ದಾರೆ. ಈ ಉಲ್ಲಿ ಮಮುತ್ ಆನೆ ಸುಮಾರು 16ನೇ ವಯಸ್ಸಿನಲ್ಲಿ ಸತ್ತಿರಬಹುದು ಎಂದು ವಿಜ್ಞಾನಿಗಳು ಅಂದಾಜು ಮಾಡಿದ್ದಾರೆ. ಆರು ಅಡಿ ಆರು ಇಂಚು ಉದ್ದ, 600kg ತೂಕ. ವಿಜ್ಞಾನಿಗಳ ಪ್ರಕಾರ ಈ ಆನೆಯನ್ನು ಮನುಷ್ಯರು ಕೊಂದಿರಬಹುದು ಎಂದಿದ್ದಾರೆ. ಉತ್ತಮ ಸ್ಥಿತಿಯಲ್ಲಿದ್ದು ಈ ಪಳವಳಿಕೆಯಲ್ಲಿ ಮಾಂಸ, ಕೂದಲು ಇತರೆ ಅಂಗಗಳು ಇನ್ನೂ ತಾಜ ಹಾಗಿವೆ. ಈ ಉಲ್ಲಿ ಮಮುತ್ ಆನೆಯಿಂದ ಮುಂದೊಂದು ದಿನ ವಿಜ್ಞಾನಿಗಳು ಕ್ಲೋನಿಂಗ್ ಮಾಡಿ ಮರುಜೀವ ಕೊಡಬಹುದು ಎಂದಿದ್ದಾರೆ.

- ಮನು ಆರ್.ವಿ

# ಮುಸ್ಸಂಜೆ ಮಳೆ

ಸರ ಸರನೆ ತೂಗಾಡಿ
ಅತ್ತಿಂದಿತ್ತಾ ಓಲಾಡಿ
ಸುಯ್ಯನೆ ಬೀಸುವ
ಗಾಳಿಯೇ ಸ್ವಾಗತ

ಹನಿ ಹನಿಯಾಗಿ
ಕೆಳಗಿಳಿವೆ ಮೋಡ
ಹನಿಯೊಳು ನುಗ್ಗಿ
ಅತ್ತ-ಇತ್ತ  ಬಂದು
ತಂಪೆನಿಸುತಿದೆ ಗಾಳಿ

ಸುವಾಸನೆ ಭರಿತ ಭೂಮಿ
ಹಿತಕೊಡುತಿದೆ ನಾಟಕ
ಒಂದನಿ ಹಿಡಿಯಬೇಕು
ಎನುವ ತವಕ ಈ ಕೈಗಳಿಗೆ

ಸದ್ದೋ ಸದ್ದು ಧರೆಯಲಿ
ಮೇಘರಾಯನ ಆರ್ಭಟಕೆ
ತುಸು ಮಿಂಚು ನಡುವಲಿ
ಗುಡುಗಿನ ಶಬ್ಧ ಮುಗಿಲಲಿ.

ಮೇಲಿಂದ ಕೆಳಗಿಳಿದು
ಹನಿಹನಿಯಾಗಿ ಹರಿದಿದೆ
ಮೂಕ ಪ್ರೇಕ್ಷಕಳಾದ
ನನ್ನ ಮನದೊಳಗೆ ಜಲವಾಗಿ.



- ಶೃತಿ .ಎಂ